ಕಂಡು, 'ಕುಬೇರನ ಲೋಕಕ್ಕೆ ಹೋಗಿ ಅಲ್ಲಿ ಅವನು ಕೊಡುವ ಆತಿಥ್ಯವನ್ನು ಸ್ವೀಕರಿಸಿ ಬಾ' ಎಂದ. ಅವಳು 'ಅಯ್ಯೋ, ಈಗ ನನಗೆ ಬೇಕಾದಷ್ಟು ಕೆಲಸವಿದೆ. ಈಗ ಹೋಗಲು ಆಗುಗುವುದಿಲ್ಲ' ಎಂದಳು. ಕುಬೇರ ಪಟ್ಟು ಹಿಡಿದ. ಈಶ್ವರ ಮತ್ತು ಪಾರ್ವತಿ ಇಬ್ಬರನ್ನೂ ಮತ್ತೊಮ್ಮೆ ಪ್ರಾರ್ಥಿಸಿದ. 'ನೋಡಪ್ಪಾ, ಬೇಕಾದರೆ ನಮ್ಮ ಗಣಪನನ್ನು ಕರೆದುಕೊಂಡು ಹೋಗು. ಮುಂದೆ ಯಾವಾಗಲಾದರೂ ನಾವು ಬರುತ್ತೇವೆ; ಆಗಬಹುದೇ?' ಎಂದು ಈಶ್ವರ ಕೇಳಿದ. ಕುಬೇರ ವಿಧಿಯಿಲ್ಲದೆ, 'ಆಯ್ತು, ಗಣಪನೇ ಬರಲಿ' ಎಂದ. ಕುಬೇರ ತನ್ನ ಲೋಕಕ್ಕೆ ಮರಳಿದ.

ನಿಗದಿಯಾದ ದಿನಕ್ಕೆ ಸರಿಯಾಗಿ ಗಣಪ ಕುಬೇರನ ಅರಮನೆ ಬಳಿ ಹಾಜರಾದ. ಅರಮನೆಗೆ ದಿವ್ಯಾಲಂಕಾರವಾಗಿತ್ತು. ಸಾವಿರಾರು ಅತಿಥಿಗಳಿಗೆ ಉತ್ತಮ ಊಟದ ವ್ಯವಸ್ಥೆ ಆಗಿತ್ತು. ಎಲ್ಲಿ ನೋಡಿದರೆ ಅಲ್ಲಿ ಅತಿಥಿಗಳು! ಗಣಪನನ್ನು ಕುಬೇರ ನೋಡಿದ ಕೂಡಲೇ, 'ಬಾರಯ್ಯ ಗಣಪ, ನನ್ನ ಅತಿಥಿಗಳನ್ನೆಲ್ಲಾ ನಿನಗೆ ಪರಿಚಯ ಮಾಡಿಕೊಡುತ್ತೇನೆ. ನಂತರ ಭೋಜನ ಶಾಲೆಗೆ ಹೋಗೋಣ' ಎಂದ. 'ಮೊದಲು ಊಟಕ್ಕೆ ವ್ಯವಸ್ಥೆ ಮಾಡಿ. ಹೊಟ್ಟೆ ತಾಳ ಹಾಕುತ್ತಿದೆ. ಎಂದಿಗೆ ಊಟ ಮಾಡಿಯೇನೋ ಎನ್ನಿಸಿದೆ. ಮೊದಲು ಊಟ; ನಂತರ ಅತಿಥಿಗಳನ್ನು ಭೇಟಿಯಾಗೋದು' ಎಂದು ಖಡಾಖಂಡಿತವಾಗಿ ಗಣಪ ನುಡಿದ.

ಕುಬೇರ ಗಣಪನನ್ನು ಭೋಜನ ಶಾಲೆಗೆ ಕರೆದೊಯ್ದ. ಬಂಗಾರದ ತಟ್ಟೆಗಳಲ್ಲಿ ವಿಧವಿಧವಾದ ಭಕ್ಷ್ಯ ಭೋಜ್ಯಗಳು ಗಣಪನ ಮುಂದೆ ಬಂದವು. ಸೇವಕರು ಎಲ್ಲ ಪದಾರ್ಥಗಳನ್ನೂ ಗಣಪನ ತಟ್ಟೆಗೆ ಬಡಿಸುತ್ತಿದ್ದರು. ಗಣಪ ಎಲ್ಲವನ್ನೂ ಮುಗಿಸುತ್ತಾ ಬಂದ. ಪಾಪ, ತುಂಬಾ ಹೊಟ್ಟೆ ಹಸಿದಿತ್ತು ಎಂದು ಕಾಣುತ್ತದೆ ಎಂದು ಬಡಿಸುವ ಜನ ಮಾತನಾಡಿಕೊಳ್ಳುತ್ತಿದ್ದರು. ಗಣಪನ ತಟ್ಟೆ ಖಾಲಿಯಾಗುವುದೇ ತಡ, ಮತ್ತೆ ಬಡಿಸುವ ಕಾಯಕ ನಡೆಯುತ್ತಲೇ ಇತ್ತು. 'ಹೊಟ್ಟೆ ತುಂಬಿತೆ ಗಣಪ?' ಕುಬೇರ ಕೇಳಿದ. 'ಇಲ್ಲಾ, ಇನ್ನೂ ಬೇಕು. ಭಕ್ಷ್ಯಗಳಂತೂ ತುಂಬಾ ಚೆನ್ನಾಗಿ ರುಚಿಕರವಾಗಿವೆ. ಇನ್ನೂ ತರಿಸಿ ಹಾಕಿರಿ, ತಿನ್ನುತ್ತೇನೆ' ಎಂದ ಗಣಪ. ಇತ್ತ ಸಾವಿರಾರು ಜನರಿಗೆ ಮಾಡಿದ ಅಡುಗೆ ಖಾಲಿಯಾಗುತ್ತಾ ಬಂದಿತು. ಮಾಡಿದ ಪದಾರ್ಥವೆಲ್ಲಾ ಗಣಪನ ಹೊಟ್ಟೆಗೆ ಸೇರಿದವು. ಎಲ್ಲರಿಗೂ ಕಳವಳ ಉಂಟಾಯಿತು. ಕುಬೇರನ ಗಮನಕ್ಕೂ ಈ ವಿಚಾರ ಬಂತು. ಕುಬೇರ ದಿಗ್ಭ್ರಾಂತನಾದ. ಗಣಪ ಕುಬೇರನ ಬಳಿ ಬಂದು, 'ನಾನು ತಿನ್ನುವುದು ಇನ್ನೂ ಮುಗಿದಿಲ್ಲ. ನನಗೆ ಇನ್ನೂ ಬೇಕು. ತಕ್ಷಣವೇ ಕೊಡು – ಇಲ್ಲದಿದ್ದರೆ ನಿನ್ನನ್ನೇ ತಿಂದುಬಿಡುತ್ತೇನೆ' ಎಂದ. ಗಣಪನ ಮಾತುಗಳನ್ನು ಕೇಳಿ ಕುಬೇರ ಬೆವತುಹೋದ.

ಮುಂದಾಗುವ ಅನಾಹುತಗಳನ್ನು ನೆನೆದು ದಿಕ್ಕು ತೋಚದೆ ಈಶ್ವರನ ಬಳಿಗೆ ಓಡಿದ. ಗಣಪ ಅವನನ್ನು ಹಿಂಬಾಲಿಸಿದ. ಗಣಪ ಅಟ್ಟಿಸಿಕೊಂಡು ಬರುತ್ತಿರುವುದನ್ನು ಕಂಡು ಕೈಲಾಸದಲ್ಲಿದ್ದ ಈಶ್ವರನನ್ನು, 'ಲೋಕೇಶ್ವರಾ, ನನ್ನನ್ನು ಪಾರುಮಾಡು' ಎನ್ನುತ್ತಾ ಅವನ ಕಾಲಿಗೆ ಅಡ್ಡಬಿದ್ದ. 'ಏಕೆ? ಏನು ಸಮಾಚಾರ?' ಈಶ್ವರ ಏನೂ ಗೊತ್ತಿಲ್ಲದವನ ಹಾಗೆ ವಿಚಾರಿಸಿದ. ಕುಬೇರ ಉತ್ತರಿಸುವಷ್ಟರಲ್ಲಿಯೇ ಗಣಪ, 'ಹೊಟ್ಟೆ ತುಂಬಾ ಊಟ ಹಾಕಲಿಲ್ಲ ಕುಬೇರ' ಎಂದು ದೂರಿದ. 'ಅಲ್ಲವೋ ಗಣಪ, ನಿನ್ನ ಹೊಟ್ಟೆ ತುಂಬಿಸಲು ಸಾಧ್ಯವೇ? ಯಾರಿಂದಲೂ ಆಗದು. ನಿನ್ನ ಅಮ್ಮ ಪಾರ್ವತಿ ಬಳಿ ಹೋಗು. ಅವಳು ನಿನ್ನ ಹೊಟ್ಟೆ ತುಂಬಿಸುತ್ತಾಳೆ' ಎಂದ ಈಶ್ವರ.

ಕುಬೇರ ನಾಚಿಕೆಯಿಂದ ತಲೆ ತಗ್ಗಿಸಿದ. 'ಕುಬೇರಾ, ಅಹಂಕಾರ ಸಲ್ಲದು, ಯಾವಾಗಲೂ ವಿನಯದಿಂದ ನಡೆಯುವುದೇ ಶ್ರೇಯಸ್ಕರ' ಎಂದ ಈಶ್ವರ. ಆಗ ಕುಬೇರನ ಅಹಂಕಾರ ಅಳಿಯಿತು.